**ಹೆಚ್ಚುವರಿ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಮುಧೋಳ**

**ಸಿ.ಸಿ ನಂ.**1022/2018

1) ಕರ್ನಾಟಕ ಸರ್ಕಾರ ಪರವಾಗಿ ಮುಧೋಳ ಪೋ.ಠಾಣೆ. ...ಪಿರ್ಯಾದಿ.

**- ವಿರುದ್ಧ -**

2) ಬಸಲಿಂಗಯ್ಯ ತಂದೆ. ಬಸಯ್ಯ ಮಠಪತಿ, ವಃ 19 ವರ್ಷ,
3) ವೀರಯ್ಯ ತಂದೆ. ಫಕೀರಯ್ಯ ಮಠಪತಿ, ವಃ 21 ವರ್ಷ,

ಇಬ್ಬರೂ ಸಾಃ ಸತ್ತಿಗೇರಿ, ಹಾಲಿಃ ಯಡಹಳ್ಳಿ, ತಾಃ ಮುಧೋಳ.

.....ಆರೋಪಿತರು

= = = = =

ದಿಃ 21-02-2022
ನಾನುಃ **ಶ್ರೀಮತಿ. ಸರಸ್ವತಿ ಹೊಟಕರ**
ಬಿ.ಎ., ಎಲ್.ಎಲ್.ಎಮ್.
ಹೆಚ್ಚುವರಿ ಪ್ರ.ದ.ನ್ಯಾ.ದಂ., ಮುಧೋಳ.

ಆದ ನಾನು ಈ ಪ್ರಕರಣದ ಆರೋಪಿಗಳಾದ ನಿಮ್ಮ ಮೇಲೆ ಈ ಕೆಳಗಿನಂತೆ ದೋಷಾರೋಪಣೆ ಇರುತ್ತದೆ.

-:: **ದೋಷಾರೋಪಣೆ** ::-

ದಿನಾಂಕ 16-10-2016 ರಂದು ರಾತ್ರಿ 01.00 ಗಂಟೆಗೆ ಮುಧೋಳ ಪೋಲಿಸ ಠಾಣೆಯ ವ್ಯಾಪ್ತಿಯಲ್ಲಿ ಬರುವ ಮುಧೋಳ ಹೊರ ವಲಯದಲ್ಲಿ ಬರುವ ಸಿದ್ದರಾಮೇಶ್ವರ ಕಾಲೋನಿ ನಿವಾಸಿ ಪಿರ್ಯಾದುದಾರ ಹಾಗೂ ಚಾಸಾ 8 ರವರ ಮನೆಯಲ್ಲಿ ನೀವು ಆರೋಪಿ 2 ಮತ್ತು 3 ರವರು ಕೂಡಿಕೊಂಡು ಕಾರಾಗೃಹ ವಾಸದ ಶಿಕ್ಷೆಗೆ ಗುರಿ ಮಾಡುವಂತಹ ಅಪರಾಧಕ್ಕಾಗಿ ರಾತ್ರಿ ವೇಳೆ ಹೊಂಚು ಹಾಕಿ ಕಬ್ಬಿಣದ ರಾಡ್ ನಿಂದ ಮನೆಯ ಕೀಲಿ ಮುರಿದು ಮನೆ ಅತಿಕ್ರಮಣ ಮಾಡಿದ್ದೀರಿ. ಈ ಮೇರೆಗೆ ನೀವು ಭಾ.ದಂ.ಪ್ರ.ಸಂ.ಕಲಂ. 457 ರ ಮೇರೆಗೆ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

2) ಮೇಲೆ ಹೇಳಿದ ಸ್ಥಳ, ದಿನಾಂಕ ಹಾಗೂ ವೇಳೆಯಲ್ಲಿ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಆರೋಪಿಗಳಾದ ನೀವು ಪಿರ್ಯಾದುದಾರ ಹಾಗೂ ಚಾಸಾ 8 ರವರ ಮನೆಯ ಬಾಗಿಲ ಕೀ ಕೊಂಡಿ ಮುರಿದು ಪಿರ್ಯಾದುದಾರವರ ಮನೆಯಲ್ಲಿ ಇಟ್ಟಿದ್ದ ಸೂಟಕೇಸ ಮುರಿದು ಅದರಲ್ಲಿದ್ದ ಬಂಗಾರದ ಸಾಮಾನು ಮತ್ತು ಅಡುಗೆ ಕೋಣೆಯಲಿಲದ್ದ ಸ್ಟೀಲಿನ ಡಬ್ಬಿಯಲ್ಲಿಯ ಬಂಗಾರದ ಸಾಮಾನುಗಳನ್ನು ಮತ್ತು ಚಾಸಾ 8 ರವರ ಮನೆಯಲ್ಲಿ ಅಲಮೇರಾ ಮುರದು ಅದರಲ್ಲಿ ಇಟ್ಟ ಬಂಗಾರದ ಸಾಮಾನುಗಳನ್ನು ಕಳ್ಳತನ ಮಾಡಿ ಹೋಗಿದ್ದೀರಿ. ಆಮೇರೆಗೆ ನೀವು ಭಾ.ದಂ.ಸಂ. 380 ರ ಮೇರೆಗೆ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

ಮೇಲ್ಕಾಣಿಸಿದ ದೋಷಾರೋಪಣೆಗಾಗಿ ನಿಮ್ಮಗಳ ಮೇಲೆ ವಿಚಾರಣೆಯಾಗಲು ಆದೇಶಿಸುತ್ತೇನೆ.

ಪ್ರಶ್ನೇಃ 1) - ಈ ಆಪಾದನೆಯನ್ನು ಓದಿ ಹೇಳಿದ್ದು ನಿಮಗೆ ತಿಳಿಯಿತೇ?
ಉತ್ತರ- (1) ರಿಂದ (6) ತಿಳಿಯಿತು.

ಪ್ರಶ್ನೇಃ 2) - ಆಪಾದನೆ ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೋ ?
ಉತ್ತರ- (1) ರಿಂದ (6) ಸುಳ್ಳು, ವಿಚಾರಣೆಯಾಗಬೇಕು.

(ಆರೋಪಿತಳಿಗೆ ದೋಷಾರೋಪಣೆಯ ಸಾರಾಂಶವನ್ನು ತೆರೆದ ನ್ಯಾಯಾಲಯದಲ್ಲಿ ಇಂದು ನನ್ನ ಸಮಕ್ಷಮ ಓದಿ ಹೇಳಿ ವ ಕೇಳಿ ಅವರು ತಿಳಿದುಕೊಂಡು ನಂತರ ಕೊಟ್ಟ ಉತ್ತರವನ್ನು ನಮೂದಿಸಲಾಯಿತು.)

ಓ ಹೇ ಕೇ ಸರಿ ಇದೆ.

ದಿನಾಂಕಃ 21.02.2022. ಹೆಚ್ಚುವರಿ **ಜೆ.ಎಂ.ಎಫ್.ಸಿ., ಮುಧೋಳ**.

2) ಬಸಲಿಂಗಯ್ಯ ತಂದೆ. ಬಸಯ್ಯ ಮಠಪತಿ,

3) ವೀರಯ್ಯ ತಂದೆ. ಫಕೀರಯ್ಯ ಮಠಪತಿ,